(ಸಾಕ್ಷಿಗೆ ದಿನಾಂಕ: 25.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಜಿ.ಆರ್., ವಾದಿ ಪರ ವಕೀಲರಿಂದಃ**

ನಿ.ಪಿ.1 ದಾಖಲೆಗೆ ಶ್ರೀನಿವಾಸ್ ಮತ್ತು ಪ್ರಕಾಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತೇನೆ. ಸದರಿ ಶ್ರೀನಿವಾಸ್ ಮತ್ತು ಪ್ರಕಾಶ್ ರವರು ನಮ್ಮ ಗ್ರಾಮದವರೆ ಆಗಿರುತ್ತಾರೆ ಎಂದರೆ ಸರಿ. ಸದರಿಯವರು ನಮ್ಮ ದಾಯಾದಿಗಳೇ ಎಂದರೆ ಹೌದು ಎಂದು ನುಡಿಯುತ್ತೇನೆ. ಪ್ರಕಾಶ್ ರವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ನಿ.ಡಿ.1, 2, 24 ರಿಂದ 27, 49 ರಿಂದ 55 ರಂತೆ ಹಾಜರುಪಡಿಸಿದ ಫೋಟೋಗಳನ್ನು ಮತ್ತು ಸಿ.ಡಿ.ಯನ್ನು ಯಾರು ತಯಾರಿಸಿರುತ್ತಾರೆ ಎಂದರೆ ನಮ್ಮ ಗ್ರಾಮದ ಶ್ರೀನಿವಾಸ್ ರವರು ಫೋಟೋಗಳನ್ನು ತೆಗೆದು ಸಿ.ಡಿ.ಗಳನ್ನು ತಯಾರಿಸಿರುತ್ತಾರೆ ಎಂದು ನುಡಿಯುತ್ತೇನೆ. ಈ ಬಗ್ಗೆ ಸದರಿ ಶ್ರೀನಿವಾಸ್ ರವರು ನಿ.ಡಿ.3ರಂತೆ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿ. ನಿ.ಡಿ.3 ಪ್ರಮಾಣ ಪತ್ರದಲ್ಲಿ ನಮೂದಿಸಿದ ಸರ್ವೆ ನಂಬರ್ ಸ್ವತ್ತಿನಲ್ಲಿಯೇ ಫೋಟೋಗಳನ್ನು ತೆಗೆದು ಸಿ.ಡಿ.ಗಳನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿ.

ನಿ.ಡಿ.5 ರಿಂದ 15 ಪಹಣಿಗಳು ದಾವಾ ಸ್ವತ್ತಿಗೆ ಸಂಬಂಧಿಸಿರುತ್ತದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ನಿ.ಡಿ.5 ರಿಂದ 15 ದಾಖಲೆಗಳನ್ನು ವಾದಿಯ ಮುಖಾಂತರ ಏಕೆ ನಿಶಾನೆಯಾಗಿ ಗುರುತಿಸಲಾಗಿರುತ್ತದೆ ಎಂದರೆ ಪಾಚಾಪೀರ್ ರವರಿಗೆ ಇರುವ ಸ್ವತ್ತುಗಳನ್ನು ನಿರೂಪಿಸಲು ಸದರಿ ದಾಖಲೆಗಳನ್ನು ವಾದಿ ಮುಖಾಂತರ ನಿಶಾನೆಯಾಗಿ ಗುರುತಿಸಲಾಗಿರುತ್ತದೆ ಎಂದು ನುಡಿಯುತ್ತೇನೆ. ನಿ.ಡಿ.16 ರಿಂದ 23 ದಾಖಲೆಗಳನ್ನು ವಾದಿಯ ಮುಖಾಂತರ ಏಕೆ ನಿಶಾನೆಯಾಗಿ ಗುರುತಿಸಲಾಗಿರುತ್ತದೆ ಎಂದರೆ ಪಾಚಾಪೀರ್ ರವರು ಆರ್ಥಿಕವಾಗಿ ಸದೃಢರಾಗಿರುತ್ತಾರೆ ಎಂದು ನಿರೂಪಿಸಲು ಸದರಿ ದಾಖಲೆಗಳನ್ನು ವಾದಿ ಮೂಲಕ ನಿಶಾನೆಯಾಗಿ ಗುರುತಿಸಲಾಗಿರುತ್ತದೆ ಎಂದು ನುಡಿಯುತ್ತೇನೆ.

ಪ್ರಸ್ತುತ ದಾವೆಯಲ್ಲಿ ನಿಶಾನೆಯಾಗಿ ಗುರುತಿಸಲಾದ ನಿ.ಡಿ.1, ನಿ.ಡಿ.24 ರಿಂದ 27 ಮತ್ತು ನಿ.ಡಿ.49 ರಿಂದ 54 ಫೋಟೋಗಳನ್ನು ಒಂದೇ ದಿನ ತೆಗೆಯಲಾಗಿತ್ತೇ ಅಥವಾ ಬೇರೆ ಬೇರೆ ದಿನ ತೆಗೆಯಲಾಗಿತ್ತೇ ಎಂದರೆ ಒಂದೇ ದಿನ ತೆಗೆಯಲಾಗಿತ್ತು ಎಂದು ನುಡಿಯುತ್ತೇನೆ. ನಿ.ಡಿ.28 ರಿಂದ 38 ದಾಖಲೆಗಳನ್ನು ಏಕೆ ಹಾಜರುಪಡಿಸಲಾಗಿರುತ್ತದೆ ಎಂದರೆ ಸದರಿ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿಯೇ ಇರುತ್ತವೆ ಎಂದು ತೋರಿಸಲು ಹಾಗೂ ನನ್ನ ಹೆಸರಿಗೆ ಆಗಿರುವುದಿಲ್ಲ ಎಂದು

ತೋರಿಸಲು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತೇನೆ. ನಿ.ಡಿ.39 ರಿಂದ 43ರಲ್ಲಿ ಕಾಣಿಸಿರುವ ಲಕ್ಷ್ಮೀದೇವಿ ಯಾರು ಎಂದರೆ ನನ್ನ ತಂಗಿ ಎಂದು ನುಡಿಯುತ್ತೇನೆ. ನಿ.ಡಿ.44 ರಿಂದ 48ರಲ್ಲಿ ಕಾಣಿಸಿರುವ ಕೆ.ಆರ್.ಕೃಷ್ಣ ಯಾರು ಎಂದರೆ ನನ್ನ ತಮ್ಮ ಎಂದು ನುಡಿಯುತ್ತೇನೆ. ನಿ.ಡಿ.39 ರಿಂದ 48 ದಾಖಲೆಗಳನ್ನು ಏಕೆ ಹಾಜರುಪಡಿಸಿರುತ್ತೇನೆ ಎಂದರೆ ನನ್ನ ತಂಗಿ ಮತ್ತು ನನ್ನ ತಮ್ಮ ಭಾಗಗಳನ್ನು ಪಡೆದುಕೊಂಡಿರುವುದನ್ನು ತೋರಿಸಲು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತೇನೆ. ನಿ.ಡಿ.39 ರಿಂದ 48ರಲ್ಲಿ ಕಾಣಿಸಿದ ಸ್ವತ್ತುಗಳು ನನ್ನ ತಂಗಿ ಮತ್ತು ತಮ್ಮನಿಗೆ ಹೇಗೆ ಬಂದಿರುತ್ತದೆ ಎಂದರೆ ನನ್ನ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತೇನೆ. ಸದರಿ ಸ್ವತ್ತುಗಳ ಖಾತೆ ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತೇ ಎಂದರೆ ಇತ್ತು ಎಂದು ನುಡಿಯುತ್ತೇನೆ.

ದಿನಾಂಕಃ 15.08.2012ರಲ್ಲಿ ನನ್ನ ತಂದೆ ವಿಭಾಗ ಮಾಡಿಕೊಟ್ಟಿರುತ್ತಾರೆ. ಸದರಿ ವಿಭಾಗ ಮೌಖಿಕವಾಗಿ ಆಗಿರುತ್ತದೆ. ನಿ.ಡಿ.49 ರಿಂದ 54 ಫೋಟೋಗಳ ಕೆಳಗೆ ಇರುವ ಬರವಣಿಗೆ ಯಾರದ್ದು ಎಂದರೆ ನನ್ನ ಒಕ್ಕಣೆ ಮೇರೆಗೆ ನಮ್ಮ ವಕೀಲರು ಅದನ್ನು ಬರೆದಿರುತ್ತಾರೆ ಎಂದು ನುಡಿಯುತ್ತೇನೆ. ವಾದಿಗೆ ಕ್ರಯಪತ್ರ ಬರೆದುಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿ ಕ್ರಯದ ಉಳಿಕೆ ಮೊಬಲಗಾದ ರೂ.25 ಸಾವಿರಗಳನ್ನು ನಮಗೆ ನೀಡಿ ಕ್ರಯಪತ್ರವನ್ನು ಬರೆಯಿಸಿಕೊಳ್ಳಲು ಕ್ರಯದ ಕರಾರು ಆದ ದಿನದಿಂದ ಇಂದಿಗೂ ತಯಾರಿರುತ್ತಾರೆ ಎಂದರೆ ಸರಿಯಲ್ಲ, ಕರಾರಿನಲ್ಲಿ ಮನೆ ಮತ್ತು ಷೆಡ್ ಇರುವ ವಿಚಾರವನ್ನು ಏಕೆ ಬರೆಯಿಸಿರುವುದಿಲ್ಲ ಎಂದರೆ ಸದರಿ ದಾಖಲೆಯನ್ನು ನಾನು ತಯಾರಿಸಿರುವುದಿಲ್ಲ, ವಾದಿಯೇ ತಯಾರಿಸಿರುತ್ತಾರೆ ಎಂದು ನುಡಿಯುತ್ತೇನೆ. ಕರಾರನ್ನು ತಯಾರಿಸುವ ಸಮಯದಲ್ಲಿ ಮನೆ ಮತ್ತು ಷೆಡ್ ಇರುವ ವಿಚಾರವನ್ನು ಹೇಳಿ ಬರೆಯಿಸಲು ತೊಂದರೆಯಿತ್ತೇ ಎಂದರೆ ಕರಾರಿನ ಒಕ್ಕಣೆಯನ್ನು ವಾದಿ ನಮ್ಮನ್ನು ಕೇಳದೆ ತಯಾರಿಸಿದ್ದು, ಸದರಿ ಕರಾರನ್ನು ನಮಗೆ ಓದಲು ಅವಕಾಶ ನೀಡದೆ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತೇನೆ. ಕರಾರಿನ ಒಕ್ಕಣೆಯನ್ನು ನಾಗರಾಜುರವರಿಗೆ ಹೇಳಿ ನಾನೇ ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ, ಕರಾರಿನಲ್ಲಿ ರೂ.10 ಲಕ್ಷ ಹಣಕ್ಕೆ ಶೇಕಡ 24ರಂತೆ ಬಡ್ಡಿಯನ್ನು ನೀಡುವ ಬಗ್ಗೆ ಬರೆದಿದೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಸ್ವತಹ ಮುಂದುವರೆದು ಕರಾರನ್ನು ವಾದಿಯೇ ತಯಾರು ಮಾಡಿಸಿಕೊಂಡು ತಂದಿದ್ದು, ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತೇನೆ. ಕರಾರನ್ನು ನನ್ನ ಒಕ್ಕಣೆ ಮೇರೆಗೆ ತಯಾರಿಸಿದ್ದರೂ ಸಹ ಸದರಿ ಕರಾರನ್ನು ವಾದಿ ತಯಾರಿಸಿರುತ್ತಾರೆ

ಎಂದು ಹಾಗೂ ಅದರ ಒಕ್ಕಣೆ ಏನಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.10 ಲಕ್ಷಕ್ಕೆ ಶೇಕಡ 24ರಂತೆ ಬಡ್ಡಿ ನೀಡುವ ಕುರಿತು ಹಾಗೂ 80 ಕ್ವಿಂಟಾಲ್ ಹಸಿ ಅಡಿಕೆ ನೀಡುವ ಕುರಿತು ಯಾವುದೇ ಮಾತುಕತೆ ಆಗದ ಕಾರಣ ಈ ಬಗ್ಗೆ ಕರಾರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ರೂ.10 ಲಕ್ಷಕ್ಕೆ ಶೇಕಡ 24ರಂತೆ ಬಡ್ಡಿ ಹಾಗೂ 80 ಕ್ವಿಂಟಾಲ್ ಹಸಿ ಅಡಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯಲ್ಲಿ ನನಗೆ ಸಮನ್ಸ್ ಬಂದ ನಂತರವೇ ಕರಾರಿನ ಕುರಿತು ನನಗೆ ತಿಳಿದು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ನಾನು ವಾದಿಯನ್ನು ಸಂಪರ್ಕ ಮಾಡಿದ್ದು ಆಗ ವಾದಿ ದಾವಾ ಸ್ವತ್ತನ್ನು ಆತನಿಗೆ ಮಾರಿದರೆ ವಾದಿ ಒಂದು ಗುಂಟೆಗೆ ರೂ.5 ಲಕ್ಷ ಹಾಗೂ ದಾವಾ ಸ್ವತ್ತಿನಲ್ಲಿರುವ ಮನೆಗೆ ರೂ.10 ಲಕ್ಷ ಹಣ ನೀಡುವುದಾಗಿ ಹಾಗೂ ದಾವೆಯನ್ನು ಹಿಂಪಡೆಯುವುದಾಗಿ ತಿಳಿಸಿದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಕ್ರಯಪತ್ರವನ್ನು ಬರೆದುಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಕ್ರಯಪತ್ರವನ್ನು ಬರೆದುಕೊಡುವಂತೆ ನಮಗೆ ನೀಡಿದ ತಿಳುವಳಿಕೆ ಪತ್ರದಂತೆ ನಾವು ಕ್ರಯಪತ್ರವನ್ನು ಬರೆದುಕೊಡದ ಕಾರಣ ವಾದಿ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 19.11.2017ರಂದು ನಾವು ಕ್ರಯಪತ್ರ ಬರೆದುಕೊಡುವುದಿಲ್ಲ ಎಂದು ವಾದಿಗೆ ತಿಳಿಸಿದ ಮೇರೆಗೆ ವಾದಿ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.